ರಾಜ್ಯ ಮಹಿಳಾ ಆಯೋಗದ ರಚನೆ

1142 (1683): ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯ ಮಹಿಳಾ ಆಯೋಗವನ್ನು ಸ್ಥಾಪಿಸಲು ಕೇಂದ್ರವು ರಾಜ್ಯ ಸರ್ಕಾರಕ್ಕೆ ಸೂಚಿಸಿದೆಯೇ;

ಆ) ಹಾಗಿದ್ದಲ್ಲಿ ರಾಜ್ಯ ಸರ್ಕಾರ ಇದರ ಬಗ್ಗೆ ತೆಗೆದುಕೊಂಡಿರುವ ಕ್ರಮ;

ಇ) ಇದುವರೆಗೂ ಸ್ಥಾಪನೆಯಾಗದಿದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ಹೌದು.

ಆ) ಕರಡು ಮಸೂದೆ ತಯಾರಾಗಿದೆ. ಅದು ಕಾನೂನು ಇಲಾಖೆಯ ಪರಿಶೋಧನಾ ಹಂತದಲ್ಲಿದೆ.

ಇ) (ಆ)ಗೆ ನೀಡಿರುವ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮಡಿವಾಳರ ಬೇಡಿಕೆಗಳ ಬಗ್ಗೆ

1143 (1730): ಶ್ರೀ ಹೆಚ್.ಎಂ. ರೇವಣ್ಣ (ಮಾಗಡಿ):–

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿನ ಮಡಿವಾಳ ಜನಾಂಗದವರನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ಮನವಿಗಳೇನಾದರೂ ಸರ್ಕಾರದವರಿಗೆ ಬಂದಿವೆಯೇ;

ಆ) ಹಾಗಿದ್ದಲ್ಲಿ ಆ ಮನವಿಗಳ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):–

ಅ) ಹೌದು.

ಆ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಪಟ್ಟಿಯಲ್ಲಿ ಜಾತಿ : ಜನಾಂಗಗಳನ್ನು ಸೇರಿಸಲು ಬರುವ ಮನವಿಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲು ಒಂದು ಸಮಿತಿಯನ್ನು ರಚಿಸಲಾಗಿದೆ. ಈ ಮನವಿಗಳನ್ನು ಸದರಿ ಸಮಿತಿಯ ಮುಂದೆ ಇಡಲಾಗಿದೆ.

ರೋಗಗ್ರಸ್ತ ಸಿಮೆಂಟ್ ಕಾರ್ಖಾನೆಗಳ ಪುನಶ್ಚೇತನ

1144 (894): ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):–

ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯಾದ್ಯಂತ ತೀವ್ರ ರೋಗಗ್ರಸ್ತ ಕಿರು ಸಿಮೆಂಟ್ ಕಾರ್ಖಾನೆಗಳನ್ನು ಪುನಃಶ್ಚೇತನಗೊಳಿಸುವುದಾಗಿ ವಿಧಾನಸಭೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಆಶ್ವಾಸನೆ ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಕಿರು ಸಿಮೆಂಟ್ ಕಾರ್ಖಾನೆಗಳು ಸಂಪೂರ್ಣ ಮುಚ್ಚಿ ಹೋಗುವ ಆಂಶ ಸರ್ಕಾರಕ್ಕೆ ತಿಳಿದಿದೆಯೇ;

ಇ) ಆಶ್ವಾಸನೆಯನ್ನು ಜಾರಿಗೊಳಿಸಲು ಸರ್ಕಾರವು ಕೈಗೊಂಡ ಕಾರ್ಯಕ್ರಮಗಳೇನು ?

ಶ್ರೀ ಸಿ. ಆರ್. ಖೆಗೀರ್ ಅಹ್ಮದ್ (ಸಣ್ಣ ಕೈಗಾರಿಕಾ ಸಚಿವರು):–

ಅ) ಹೌದು.

ಆ) ಕಿರು ಸಿಮೆಂಟ್ ಕಾರ್ಖಾನೆಗಳು ಎದುರಿಸುತ್ತಿರುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿವೆ.

ಇ) ಕಿರು ಸಿಮೆಂಟ್ ಕಾರ್ಖಾನೆಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಶೀಲಿಸಿ ಅವುಗಳ ಪುನಶ್ಚೇತನಕ್ಕೆ ಸೂಕ್ತ ಪರಿಹಾರ ನೀಡುವ ಬಗ್ಗೆ ಸರ್ಕಾರವು ಪರಿಶೀಲಿಸುತ್ತಿದೆ.

ರೇಷ್ಮೆ ಹುಳುಗಳ ರೋಗದಿಂದ ಉತ್ಪತ್ತಿ ಕಡಿಮೆ

1145 (680): ಶ್ರೀ ವೈ.ಕೆ. ರಾಮಯ್ಯ (ಕುಣಿಗಲ್):–

ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ರೇಷ್ಮೆ ಹುಳುಗಳಿಗೆ ತಗಲಿದ ಗಂಟು ರೋಗದಿಂದಾಗಿ ಗೂಡಿನ ಉತ್ಪತ್ತಿ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಉತ್ಪತ್ತಿ ಎಷ್ಟು ಕಡಿಮೆಯಾಗಿದೆ;

ಇ) ರೋಗವನ್ನು ನಿವಾರಣೆ ಮಾಡಿ ಗೂಡಿನ ಗುಣಮಟ್ಟ ಸುಧಾರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಡಾ: ಜಿ. ಪರಮೇಶ್ವರ್ (ರೇಷ್ಮೆ ಖಾತೆ ಸಚಿವರು):–

ಅ) ಬಂದಿದೆ.

ಆ) 91-92ರಲ್ಲಿ 7068 ಟನ್ ಗೂಡಿನ ಉತ್ಪನ್ನ ಕಡಿಮೆ ಆಗಿದೆ. 92–93ರಲ್ಲಿ ಏಪ್ರಿಲ್‌ನಿಂದ ಫೆಬ್ರವರಿ ಅಂತ್ಯದವರೆಗೆ ಗೂಡಿನ ಉತ್ಪನ್ನ ಕಳೆದ ವರ್ಷಕ್ಕಿಂತ 12,366 ಟನ್ ಜಾಸ್ತಿಯಾಗಿದೆ.

ಇ) ರೋಗ ನಿಯಂತ್ರಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಬಿತ್ತನೆ ವಲಯದಲ್ಲಿ:

1. ಪ್ರತಿ ಬಿತ್ತನೆ ಹುಳು ಸಾಕಾಣಿಕೆ ಮಾಡುವವರ ಹುಳು ಸಾಕಾಣಿ ಮನೆಗಳನ್ನು ಮತ್ತು ಉಪಕರಣಗಳನ್ನು ಫಾರ್ಮಲಿನ್ ದ್ರಾವಣ, ಬ್ಲೀಚಿಂಗ್ ಪುಡಿ ದ್ರಾವಣದಿಂದ ಪ್ರತಿ ಬೆಳೆಯ ನಂತರ ಮತ್ತು ಬೆಳೆಗಿನ್ನ ಮುನ್ನ ಸಿಂಪಡಿಸುವುದು.

2. ಪ್ರತಿ ಹಂತದಲ್ಲೂ ಆರೋಗ್ಯಕರವಲ್ಲದ ಹುಳುಗಳನ್ನು ಆಯ್ಕೆ ಮಾಡಿ ಪರೀಕ್ಷಿಸಿ ಆ ಬೆಳೆಯಲ್ಲಿ ಗಂಟು ರೋಗವಿದ್ದರೆ ಅಂತಹ ಬೆಳೆಯನ್ನು ಪೂರ್ಣವಾಗಿ ತ್ಯಜಿಸಲಾಗುವುದು. ಕೊನೆ ಹಂತದಲ್ಲಿ ಈ ರೋಗ ಕಾಣಬಂದರೆ ಆ ಬೆಳೆಯಲ್ಲಿ ಉತ್ಪನ್ನವಾದ ಗೂಡುಗಳನ್ನು ಬಿತ್ತನೆಗೆ ಯೋಗ್ಯವಲ್ಲವೆಂದು ನೂಲು ಬಿಚ್ಚಾಣಿಕೆಗೆ ಮಾರಾಟ ಮಾಡುವುದು.